**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/12/2023 )**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಜೆ ಡಿ ಎನ್ ವಕೀಲರಿಂದ,**

ನಾನು ವಾದಿ ಬ್ಯಾಂಕಿನ ಪರವಾಗಿ ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ ಮತ್ತು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಾನು ಪ್ರತಿವಾದಿಯ ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–1 ಎಂದು, ಪ್ರತಿವಾದಿಗೆ ಸಾಲ ಮಂಜೂರು ಮಾಡಿದ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–2 ಎಂದು, ಲೆಟರ್ ಅಪ್ ಅಂಡರ್ ಟೇಕಿಂಗ್ ಅನ್ನು ಹಾಜರುಪಡಿಸಿದ್ದು ನಿಪಿ– 3 ಎಂದು, ಸಾಲದ ಕರಾರನ್ನು ಹಾಜರುಪಡಿಸಿದ್ದು ಅದನ್ನು ನಿಪಿ–4 ಎಂದು, 4 ಸಾಲದ ಮರುಪಾವತಿ ಅವಧಿ ವಿಸ್ತರಿಸಲು ನೀಡಿದ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮಾಗಿ ನಿಪಿ–5 ರಿಂದ 8 ಎಂದು, ಪ್ರತಿವಾದಿಗೆ ಕಳುಹಿಸಿದ 4 ನೋಟೀಸಿನ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ– 9 ರಿಂದ 12 ಎಂದು, ಪ್ರತಿವಾದಿಗೆ ನೊಟೀಸು ಜಾರಿಯಾದ ಬಾಬ್ತು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–13 ಎಂದು, ಪ್ರತಿವಾದಿ ನೋಟೀಸು ಸ್ವೀಕರಿಸದೇ ವಾಪಸ್ಸು ಬಂದಿರುವ ಅಂಚೆ ನೊಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ–14 ಎಂದು, ಸದ್ರಿ ನೋಟೀಸನು ತೆರೆದು ನೋಡಲಾಗಿ ಅದರಲ್ಲಿರುವ ನೊಟೀಸಿನ ಪ್ರತಿಯನ್ನು ನಿಪಿ–14 ಎ ಎಂದು, ಪ್ರತಿವಾದಿಯ ಸಾಲದ ಖಾತೆಯ ಸ್ಟೇಟ್ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ–15 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿಯಾಗಬೇಕೆಂದು ಕೋರುತ್ತೇನೆ.

**ಪ್ರತಿವಾದಿ ಏಕತರ್ಪಿಯಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**sd/-**

**ಪ್ರಧಾನ ಸಿವಿಲ್ ಜಡ್ಜ, ಭಟ್ಕಳ**